ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಡಿ ಎಸ್ ಇ ಆರ್ ಟಿ
DSERT
DEPARTMENT OF STATE EDUCATIONAL RESEARCH AND TRAINING
NO 4, 100 FT RING ROAD, BANASHANKARI 3RD STAGE BENGALURU - 085
E MAIL:dsertkar@gmail.com , Website: http://dsert.kar.nic.in
Phone : 080
26422372
26422373
26422374
Fax:26422377

ಶಿ.ತ2/ಆಐಇಖಿ/ಅ.ಶಾಲಾ ಭೇಟಿ/ಡಯಟ್ ಸಭೆ.ನಡಾವಳಿ06/2014-15 ದಿನಾಂಕ .09.03.2015

## ಸಭಾ ನಡಾವಳಿ

ವಿಷಯ:- ದಿನಾಂಕ 09-03-2015 ರಂದು ಆಇಖಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಡಯಟ್ ನಲ್ಲಿ ನಡೆದ ಡಯಟ್ ಶೈಕ್ಷಣಿಕ ಸ್ಪಂದನ ಕಾರ್ಯಕ್ರಮದ ಸಭಾನಡಾವಳಿ.

ದಿನಾಂಕ 09-03-2015 ರಂದು ಡಯಟ್, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಶೈಕ್ಷಣಿಕ ಸ್ಪಂದನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಶ್ರೀ. ಎಸ್. ಜಯಕುಮಾರ್, ಮಾನ್ಯ ನಿರ್ದೇಶಕರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು/ ಸಿಬ್ಬಂದಿ ವರ್ಗದವರ ವಿವರ:-**

1. ಶ್ರೀ ಎಸ್. ಜಯಕುಮಾರ್, ನಿರ್ದೇಶಕರು, ಡಿ.ಎಸ್.ಇ.ಆರ್.ಟಿ
2. ಶ್ರೀ ಎಂ.ಪಿ. ಮಾದೇಗೌಡ, ಉಪನಿರ್ದೇಶಕರು (ಅಭಿವೃದ್ಧಿ)
3. ಶ್ರೀ ಗುರುರಾಜ್, ಉಪನಿರ್ದೇಶಕರು (ಆಡಳಿತ)
4. ಶ್ರೀ ಗಂಗಮಾರೇಗೌಡ ಎಂ.ಹೆಚ್, ಹಿ.ಸ.ನಿ, ಡಿ.ಎಸ್.ಇ.ಆರ್.ಟಿ
5. ಶ್ರೀ ಆರ್. ಮಂಜುನಾಥ್, ಹಿ.ಸ.ನಿ, ಡಿ.ಎಸ್.ಇ.ಆರ್.ಟಿ
6. ಶ್ರೀಮತಿ ಸಿ.ಎಸ್. ಲಲಿತಪ್ರಸಾದ್, ~~ಡಿ.ಎಸ್.ಇ.ಆರ್.ಟಿ~~ TESI India
7. ಶ್ರೀಮತಿ ಸಿ. ನಾಗಮಣಿ, ಹಿ.ಸ.ನಿ, ಡಿ.ಎಸ್.ಇ.ಆರ್.ಟಿ
8. ಶ್ರೀಮತಿ ಉಷಾ .ಎಂ.ಡಿ, ಹಿ.ಸ.ನಿ, ಡಿ.ಎಸ್.ಇ.ಆರ್.ಟಿ
9. ಶ್ರೀಮತಿ ಗೀತಾ .ಕೆ.ಜಿ, ಹಿ.ಸ.ನಿ, ಡಿ.ಎಸ್.ಇ.ಆರ್.ಟಿ
10. ಶ್ರೀಮತಿ ಅಂಜಲಿನಾ ಕ್ರಿಸ್ಟಿನಾ, ಹಿ.ಸ.ನಿ, ಡಿ.ಎಸ್.ಇ.ಆರ್.ಟಿ
11. ಶ್ರೀ ರಂಗಧಾಮಪ್ಪ .ಸಿ, ಹಿ.ಸ.ನಿ, ಡಿ.ಎಸ್.ಇ.ಆರ್.ಟಿ
12. ಶ್ರೀ ಡಾ. ಎಂ.ವಿ. ಕೃಷ್ಣಮೂರ್ತಿ, ಹಿ.ಸ.ನಿ, ಡಿ.ಎಸ್.ಇ.ಆರ್.ಟಿ
13. ಶ್ರೀಮತಿ ಶಾಂತಲಾ, ಹಿ.ಸ.ನಿ, ಡಿ.ಎಸ್.ಇ.ಆರ್.ಟಿ
14. ಶ್ರೀಮತಿ ಎಂ.ವಿ. ಕುಮಾರಿ, ಹಿ.ಸ.ನಿ, ಡಿ.ಎಸ್.ಇ.ಆರ್.ಟಿ
15. ಶ್ರೀ ಆರ್. ಶಿವಣ್ಣರೆಡ್ಡಿ, ಡಿ.ವೈ.ಪಿ.ಸಿ, ಆರ್.ಎಂ.ಎಸ್.ಎ
16. ಶ್ರೀ ವಿ.ಎನ್. ರವಿಪ್ರಕಾಶ್, ಬಿ.ಆರ್.ಪಿ, ದೇವನಹಳ್ಳಿ
17. ಶ್ರೀ ಗುರುರಾಜ್ ಹೊಸೂರಕರ್, ಸಹಶಿಕ್ಷಕರು, ಸ.ಪ.ಪೂ. ಕಾಲೇಜು, ದೇವನಹಳ್ಳಿ
18. ಸುಚಿತ್ರ ಎಸ್.ಎಸ್., ಟಿ.ಜಿ.ಟಿ, ಸ.ಹಿ.ಪ್ರಾ ಶಾಲೆ, ಹೊನ್ನೇನಹಳ್ಳಿ, ನೆಲಮಂಗಲ ತಾಲ್ಲೂಕು
19. ಎನ್.ಡಿ. ಲಕ್ಷ್ಮೀಕಾಂತ, ಮುಖ್ಯಶಿಕ್ಷಕರು, ಬಿಜ್ಜವರ, ದೇವನಹಳ್ಳಿ ತಾಲ್ಲೂಕು
20. ಡಯಟ್ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲಾ ಹಿರಿಯ ಉಪನ್ಯಾಸಕರು/ ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರು.
21. ಹೊಸಕೋಟೆ, ದೇವನಹಳ್ಳಿ, ನೆಲಮಂಗಲ ಹಾಗೂ ದೊಡ್ಡಬಳ್ಳಾಪುರ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು/ಕ್ಷೇತ್ರ ಸಮನ್ವಯಾಧಿಕಾರಿಗಳು.

ಶ್ರೀಯುತ ಎಂ.ಪಿ. ಮಾದೇಗೌಡ, ಉಪನಿರ್ದೇಶಕರು(ಅಭಿವೃದ್ಧಿ) ರವರು ಸಭೆಗೆ ಹಾಜರಿದ್ದರವರನ್ನು ಸ್ವಾಗತಿಸಿದರು.

1. **ಶ್ರೀ ಗಂಗಮಾರೇಗೌಡ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ**
   - **ಸರ್ಕಾರಿ ಪ್ರೌಢ ಶಾಲೆ, ಕೆಂಪಲಿಂಗನಹಳ್ಳಿ, ನೆಲಮಂಗಲ ತಾಲ್ಲೂಕು**
   - ಶಾಲೆಯ ಶಿಕ್ಷಕರಿಗೆ ಈ ವರ್ಷ ಯಾವ ಯಾವ ತರಬೇತಿಗಳಾಗಿವೆ ಎಂಬ ಕುರಿತು ಮಾಹಿತಿ ಇರುವುದಿಲ್ಲ.
   - ಶಾಲೆಯ ನಲಿ–ಕಲಿ ಕಲಿಕೆ ಚೆನ್ನಾಗಿದೆ.
   - ಬಿ.ಇ.ಓ/ಬಿ.ಆರ್.ಸಿ ಗಳು ಅವರವರ ಬ್ಲಾಕಿನ ಎಲ್ಲಾ ಶಾಲೆಗಳಲ್ಲಿ ಕನಿಷ್ಠ 3 ವರ್ಷದ ತರಬೇತಿ ಕುರಿತು ಯಾವ ಶಿಕ್ಷಕರಿಗೆ ಯಾವ ವರ್ಷ ಏನು ತರಬೇತಿಯಾಗಿದೆ ಎಂಬ ಬಗ್ಗೆ ಮಾಹಿತಿಯನ್ನು ಕಡ್ಡಾಯವಾಗಿ ಶಾಲೆಯಲ್ಲಿ ಇಡಲು ಬಿ.ಇ.ಓ. ಗಳಿಗೆ ಸೂಚಿಸಲಾಯಿತು.
   - ಎಸ್.ಡಿ.ಎಂ.ಸಿ ತರಬೇತಿಯನ್ನು ಎಲ್ಲಾ ಮುಖ್ಯ ಶಿಕ್ಷಕರುಗಳಿಗೆ ನೀಡುವಂತೆ ಸೂಚಿಸಲಾಯಿತು..
   - ಆರ್.ಎಫ್.ಡಿ ಗೆ ಸಂಬಂಧಿಸಿದಂತೆ ಪ್ರಗತಿ ವರದಿ ಕಳುಹಿಸಲು ಡಯಟ್ ಪ್ರಾಚಾರ್ಯರಿಗೆ ತಿಳಿಸಲಾಯಿತು..
2. **ಶ್ರೀ ರಂಗಧಾಮಪ್ಪ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ**
   - **ಅರವಿಂದ ಡಿ.ಇಡಿ ಕಾಲೇಜು, ದೊಡ್ಡಬಳ್ಳಾಪುರ ತಾಲ್ಲೂಕು,**
   - ಮೊದಲನೇ ವರ್ಷದಲ್ಲಿ 22 ಡಿ.ಇಡಿ ವಿದ್ಯಾರ್ಥಿಗಳಿದ್ದು ಅದರಲ್ಲಿ 17 ವಿದ್ಯಾರ್ಥಿಗಳು ಹಾಜರಿರುತ್ತಾರೆ.
   - ಎರಡನೇ ವರ್ಷದ ಡಿ.ಇಡಿಯಲ್ಲಿ 22 ವಿದ್ಯಾರ್ಥಿಗಳಿದ್ದು ಅದರಲ್ಲಿ 16 ವಿದ್ಯಾರ್ಥಿಗಳು ಮಾತ್ರ ಹಾಜರಿರುತ್ತಾರೆ.
   - ಪ್ರಶಿಕ್ಷಕರು ತರಬೇತಿ ಪಡೆದಿದ್ದು ತರಬೇತಿ ಬಗ್ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.
   - ವೇಳಾಪಟ್ಟಿಯನ್ನು ಇನ್ನು ಕ್ರಮಬದ್ಧವಾಗಿ ಪಾಲಿಸಲು ತಿಳಿಸಲಾಯಿತು.
   - **ಸರ್ಕಾರಿ ಪದವಿ ಪೂರ್ವ ಕಾಲೇಜು ದೊಡ್ಡಬಳ್ಳಾಪುರ,**
   - **ಪ್ರೌಢ ಶಾಲಾ** ವಿಭಾಗದಲ್ಲಿ 1300 ವಿದ್ಯಾರ್ಥಿಗಳು, 45 ಬೋಧಕರು ಹಾಗೂ 12 ಬೋಧಕೇತರ ಸಿಬ್ಬಂದಿ ಇರುತ್ತಾರೆ.
   - ಈ ಶಾಲೆಯಲ್ಲಿ ಐಸಿಟಿ–3 ಯೋಜನೆಯಲ್ಲಿ ನೀಡಿರುವ ಬ್ಯಾಟರಿ, ಯು.ಪಿ.ಎಸ್ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ.
   - ಈ ಶಾಲೆಯಲ್ಲಿ 13 ವಿಷಯ ಶಿಕ್ಷಕರಿದ್ದು ಇವರರಲ್ಲಿ ಎಸ್.ಟಿ.ಎಫ್ ತರಬೇತಿ ಇಬ್ಬರು ಶಿಕ್ಷಕರಿಗೆ ಮಾತ್ರ ನೀಡಲಾಗಿದೆ.
   - ಶಾಲಾ ಹಂತದಲ್ಲಿ ತಾತ್ಕಾಲಿಕವಾಗಿ ಎಸ್.ಟಿ.ಎಫ್ ತರಬೇತಿ ನೀಡಲು ಮುಖ್ಯ ಶಿಕ್ಷಕರು ಕ್ರಮ ಕೈಗೊಳ್ಳಲು ತಿಳಿಸಲಾಯಿತು
   - ಸಿ.ಸಿ.ಇಗೆ ತರಬೇತಿಯನ್ನು ಶಾಲಾ ಹಂತದಲ್ಲಿ ನೀಡಿ ವಿನೂತನ ವ್ಯವಸ್ಥೆಯಲ್ಲಿ ಪಾಲಿಸಿರುತ್ತಾರೆ. ಮತ್ತು ಕುರಿತು ವಾರಕ್ಕೊಮ್ಮೆ ಶಿಕ್ಷಕರ ಸಭೆ ನಡೆಸಿ ಮಾರ್ಗದರ್ಶನ ನೀಡಿರುತ್ತಾರೆ.
   - ಜೂನಿಯರ್ ಕಾಲೇಜಿನ ಪ್ರೌಢ ಶಾಲಾ ವಿಭಾಗದಲ್ಲಿ ಸಂಚಿತ ನಿಧಿ ಲಭ್ಯವಿದ್ದಲ್ಲಿ ಕಂಪ್ಯೂಟರ್‌ಗಳ ಖರೀದಿಗೆ ಪ್ರಸ್ತಾವನೆಯನ್ನು ಡಿ.ಎಸ್.ಇ.ಆರ್.ಟಿ ಗೆ ಕಳುಹಿಸಲು ತಿಳಿಸಲಾಯಿತು
   - **ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ರಾಜೀವ್‌ಗಾಂಧಿನಗರ, ದೊಡ್ಡಬಳ್ಳಾಪುರ ತಾಲ್ಲೂಕು**
   - ಶಾಲೆಯ ವಾತಾವರಣ ಚೆನ್ನಾಗಿದೆ.
   - 1, 2, 3 ನಲಿ–ಕಲಿ ತರಗತಿ ಕಲಿಕೆ ಉತ್ತಮವಾಗಿದೆ.
   - ಶಾಲೆಯಲ್ಲಿ ಎಸ್.ಡಿ.ಎಂ.ಸಿ. ಯನ್ನು ಹೊಸ ಆದೇಶದಂತೆ ಪುನರ್ ರಚಿಸಿಲ್ಲ.
   - ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ತಿಮ್ಮಸಂದ್ರ, ಈ ಶಾಲಾ ಆವರಣ ಚೆನ್ನಾಗಿ ನಿರ್ವಹಿಸಿದೆ.
   - ಶಿಕ್ಷಕರನ್ನು ತರಬೇತಿಗೆ ಮುಂದಿನ ವರ್ಷದ ಯೋಜನೆಯಲ್ಲಿ ಸೇರಿಸಲು ಆರ್.ಎಂ.ಎಸ್.ಎ ಅಧಿಕಾರಿಗಳಿಗೆ ತಿಳಿಸಲಾಯಿತು.
   - ಹೊಸ ಆದೇಶದಂತೆ ಎಸ್.ಡಿ.ಎಂ.ಸಿ.ಗಳನ್ನು ಪುನರ್ ರಚಿಸಲು ತಿಳಿಸಿದರು – ಕ್ರಮ ಎಲ್ಲಾ ಬಿ.ಇ.ಓ ಗಳು.
3. **ಶ್ರೀಮತಿ ಅಂಜಲೀನಾ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ**
   - **ಸರ್ಕಾರಿ ಹಿ.ಪ್ರಾ.ಶಾಲೆ ನೆಲಮಂಗಲ ಟೌನ್**
   - ಇಲ್ಲಿ ಒಟ್ಟು 245 ಮಕ್ಕಳಿದ್ದಾರೆ.
   - ಶಾಲೆ ವಾತಾವರಣ ಸ್ವಚ್ಛವಾಗಿದೆ.

- ಶಾಲೆ ಪ್ರಾರಂಭವಾದರೂ ಹಾಲನ್ನು ವಿತರಣೆ ಮಾಡುತ್ತಿದ್ದು, ಪ್ರಾರ್ಥನೆಗೆ ಮುಂಚಿತವಾಗಿ ವಿತರಿಸಲು ತಿಳಿಸಲಾಯಿತು
- 8ನೇ ತರಗತಿ ಮಕ್ಕಳು ಇಂಗ್ಲೀಷ್‌ನಲ್ಲಿಯೇ ಉತ್ತರಿಸಿರುವುದು ಉತ್ತಮ ಬೆಳವಣಿಗೆ
- 6ನೇ ತರಗತಿ ಮಕ್ಕಳು ಇಂಗ್ಲೀಷ್ ಪಾಠವನ್ನು ಸ್ಪಷ್ಟವಾಗಿ ಇಂಗ್ಲೀಷ್‌ನಲ್ಲಿ ತಪ್ಪಿಲ್ಲದೇ ಓದಿದರು.
- ಮೀನಾ, ರೇಡಿಯೋ ಮತ್ತು ಎಜುಸ್ಯಾಟ್ ಕಾರ್ಯಕ್ರಮಗಳ ಕುರಿತು ದಾಖಲೆಗಳನ್ನು ನಿರ್ವಹಿಸಿದ್ದಾರೆ.
- ಶಾಲೆಯಿಂದ ಹೊರಗುಳಿದ ಒಂದು ಮಗುವನ್ನು ಶಾಲೆಗೆ ಮರು ದಾಖಲಾತಿ ಮಾಡಲಾಯಿತು.
- ಮಕ್ಕಳು ಕಂಪ್ಯೂಟರ್ ಪ್ರಾಜೆಕ್ಟ್ ಮಾಡಿದ್ದಾರೆ.
- ದೈಹಿಕ ಶಿಕ್ಷಣಶಿಕ್ಷಕರು ಇದ್ದರೂ ಮಕ್ಕಳು ತಾಲ್ಲೂಕು ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶವಾಗಿಲ್ಲದಿರುವುದು ವಿಷಾದನೀಯ ವಿಚಾರವಾಗಿದೆ.
- ಮಕ್ಕಳಿಗೆ ಇಂಗ್ಲೀಷ್ ಪೇಪರ್ ಓದಿಸಲು ಸೂಚಿಸಲಾಯಿತು.
- 10 ಅಂಶಗಳ ಕಾರ್ಯಕ್ರಮ ಪರಿಣಾಮಕಾರಿಯಾಗಿ ಆಗಿಲ್ಲ.
- ಯಾವುದೇ ಗೋಡೆ ಬರಹ ಬರೆದಿರುವುದಿಲ್ಲ .
- ಬಿ.ಇ.ಓ/ಬಿ.ಆರ್.ಸಿಗಳು ಈ ಶಾಲೆಗೆ ಭೇಟಿ ನೀಡಿ ದೈಹಿಕ ಶಿಕ್ಷಣ ಶಿಕ್ಷಕಕ ಕಾರ್ಯ ಪರಿಶೀಲನೆ ಹಾಗು ಮಕ್ಕಳನ್ನು ವಿವಿಧ ಹಂತಗಳ ಸ್ಪರ್ಧೆಗಳಲ್ಲಿ ಭಾಗವಹಿಸಲು ಕ್ರಮಕೈಗೊಳ್ಳುವುದು.
- ದೈಹಿಕ ಶಿಕ್ಷಣ ಶಿಕ್ಷಕರು ಇರುವ ಶಾಲೆಗಳಲ್ಲಿ ಮಕ್ಕಳನ್ನು ತಾಲ್ಲೂಕು ಮಟ್ಟದ ಸ್ಪರ್ಧೆಗಳಿಗೆ ಭಾಗವಹಿಸಲು ಕಳುಹಿಸುತ್ತಿಲ್ಲ. ಆದರೆ ದೈಹಿಕ ಶಿಕ್ಷಣ ಶಿಕ್ಷಕರು ಇಲ್ಲದೇ ಇರುವ ಶಾಲೆಗಳ ಹೆಚ್ಚಿನ ಮಕ್ಕಳು ತಾಲ್ಲೂಕು ಮಟ್ಟದಲ್ಲಿ ಭಾಗವಹಿಸುತ್ತಿದ್ದಾರೆಂದು ಉಪನಿರ್ದೇಶಕರು (ಅಭಿವೃದ್ಧಿ) ರವರು ಹೇಳಿದಾದ ಈ ಕುರಿತು ಅಗತ್ಯ ಕ್ರಮ ಜಿಲ್ಲೆಯಲ್ಲಿ ಕೈಗೊಳ್ಳಲು ಸೂಚಿಸಲಾಯಿತು.
- ಲೈಬ್ರರಿಯಲ್ಲಿ ಇಂಗ್ಲೀಷ್ ಪೇಪರ್ ತರಿಸಲು ಕ್ರಮಕೈಗೊಳ್ಳಲು ಸೂಚಿಸಲಾಯಿತು.
- 10 ಅಂಶಗಳ ಕಾರ್ಯಕ್ರಮದ ಕುರಿತಾಗಿ ಕ್ರಮಕೈಗೊಳ್ಳಲು ಸೂಚಿಸಲಾಯಿತು..

4. **ಶ್ರೀಮತಿ ಕೆ.ಜಿ. ಗೀತಾ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ**

- **ನೆಲಮಂಗಲ ಬಿ.ಆರ್.ಸಿ**
- ಕೇಂದ್ರದಲ್ಲಿ ಭೌತಿಕ ಸೌಲಭ್ಯಗಳ ಕೊರತೆ ಇದೆ.
- ನಿರ್ವಹಣೆಗೂ ಸಹ ಅನುದಾನದ ಕೊರತೆ ಇದೆ.
- **ಕೋಟೆ ಬೀದಿ ಶಾಲೆ, ನೆಲಮಂಗಲ ತಾಲ್ಲೂಕು**
- ಟೆಲಿ ಎಜುಕೇಷನ್ ಕಾರ್ಯಕ್ರಮದಲ್ಲಿ ಇಂಗ್ಲೀಷ್ ಪಾಠವನ್ನು ಕನ್ನಡದಲ್ಲಿ ಭಾಷಾಂತರಿಸಿ ಮಾಡಲಾಗುತ್ತಿದೆ.
- ಎಲ್ಲ ಮಕ್ಕಳ ಜೊತೆ 4 ವಿಶೇಷ ಮಕ್ಕಳು ಕುಳಿತು ಪಾಠ ಕೇಳುತ್ತಿದ್ದರು.
- ಶಿಕ್ಷಕರು ಗುಣಾತ್ಮಕ ಪಾಠ ಮಾಡುತ್ತಿರುವ ಅಂಶ ಗಮನಿಸಲಾಗಿದೆ.
- ಸಿ.ಆರ್.ಪಿಗಳಲ್ಲಿ ವಿಜ್ಞಾನ ಸಿ.ಆರ್.ಪಿ ಗಳ (ಶಿಕ್ಷಕರ) ಕೊರತೆ ಇದೆ.
- ಶಾಲೆಗಳಿಗೆ ಕಂಪ್ಯೂಟರ್ ಮತ್ತು ಲ್ಯಾಪ್‌ಟಾಪ್‌ಗಳ ಅಗತ್ಯವಿದೆ.
- ಟೆಲಿ ಎಜುಕೇಷನ್ ವೇಳೆಯನ್ನು ಬದಲಾವಣೆ ಮಾಡುವಂತೆ ಕೋರಿದ್ದಾರೆ.
- ಶಾಲೆಗಳ ಸಾದಿಲ್ವಾರು ಸಾಕಾಗುತ್ತಿಲ್ಲವೆಂದು ಶಿಕ್ಷಕರು ತಿಳಿಸಿದ್ದಾರೆ.
- ಮಹಿಳಾ ದಿನಾಚರಣೆ ಪ್ರಯುಕ್ತ ಮಕ್ಕಳಿಗೆ ಕರಾಟೆ ಕಲಿಕೆ ಆಗುತ್ತಿರುವ ಅಂಶವನ್ನು ಗಮನಿಸಲಾಗಿದೆ.
- ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲು ಶಿಕ್ಷಕರು ತಿಳಿಸಿರುವ ಅಂಶವನ್ನು ವ್ಯಕ್ತಪಡಿಸಿದರು.
- ಟೆಲಿ ಎಜುಕೇಶನ್‌ನ ಇಂಗ್ಲೀಷ್ ಪಾಠಗಳನ್ನು ಇಂಗ್ಲೀಷ್‌ನಲ್ಲಿಯೇ ವಿವರಿಸುವಂತೆ ಹಾಗು ಕಂಪ್ಯೂಟರ್ ಅಥವಾ ಲ್ಯಾಪ್‌ಟಾಪ್‌ಗಳನ್ನು ಟಿ.ಡಬ್ಲ್ಯುಎಫ್ ನಿಂದ ಪಡೆಯಲು ಪ್ರಸ್ತಾವನೆ ಸಲ್ಲಿಸಲು ನಿರ್ದೇಶಕರು ತಿಳಿಸಿದರು.

5. **ಶ್ರೀಮತಿ ನಾಗಮಣಿ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ**

- **ಸರ್ಕಾರಿ ಜೂನಿಯರ್ ಕಾಲೇಜು, ನೆಲಮಂಗಲ ತಾಲ್ಲೂಕು**

- ಈ ಶಾಲೆಯಲ್ಲಿ 572 ವಿದ್ಯಾರ್ಥಿಗಳು, 19 ಶಿಕ್ಷಕರು ಕಾರ್ಯನಿರ್ವಹಿಸುತ್ತಿರುತ್ತಾರೆ.
- ಶೈಕ್ಷಣಿಕ ಮನೋವಿಜ್ಞಾನದ 6 ಟೆಸ್ಟ್ ಮಾಡಲು ತಿಳಿಸಲಾಗಿದ್ದರೂ ಮಾಡಿರುವುದಿಲ್ಲ.
- ಶಿಕ್ಷಕರು ಆಯ್ದ ಮಕ್ಕಳಿಗೆ ಮಾತ್ರ ಈ ತರಬೇತಿ ನೀಡುತ್ತಿರುವ ಅಂಶ ಕಂಡು ಬಂದಿತು.
- ಶಾಲೆಯಲ್ಲಿ ಸಿ.ಸಿ.ಇ ಅಡಿ ಬೋಧನಾ ಕ್ರಮ ಚೆನ್ನಾಗಿದೆ.
- ಗ್ರಂಥಾಲಯದ ಸ್ವಚ್ಛತೆ ಇರುವುದಿಲ್ಲ ಮತ್ತು ಗ್ರಂಥಾಲಯದ ವಹಿ ಸರಿಯಾದ ರೀತಿಯಲ್ಲಿ ನಿರ್ವಹಿಸಿಲ್ಲ.
- ತೋಟಗಾರಿಕೆ ಶಿಕ್ಷಕರಿದ್ದರೂ ಯಾವುದೇ ಕಾರ್ಯ ಮಾಡಿರುವುದಿಲ್ಲ.
- ಶೌಚಾಲಯದ ಸ್ವಚ್ಛತೆ ಇರುವುದಿಲ್ಲ.
- ಶಾಲೆಯಲ್ಲಿ ಮಕ್ಕಳ ಇಂಗ್ಲೀಷ್ ಭಾಷಾ ಕಲಿಕೆ ಚೆನ್ನಾಗಿದೆ.
- ನ್ಯೂನ್ಯತೆಗಳನ್ನು ಸರಿಪಡಿಸಲು ಸದರಿ ಶಾಲೆಗೆ ಪ್ರತಿದಿನ ಅಥವಾ ವಾರಕ್ಕೊಮ್ಮೆ ಪ್ರಾರ್ಥನೆ ಮುಗಿಯುವವರೆಗೂ ಬಿ.ಇ.ಓ/ಬಿ.ಆರ್.ಸಿಗಳು ಅಲ್ಲಿಯೇ ಇದ್ದು ವ್ಯವಸ್ಥಿತವಾಗಿ ನಡೆಯುವಂತೆ ಕ್ರಮವಹಿಸಲು ನಿರ್ದೇಶಕರು ಸೂಚಿಸಿದರು.

6. **ಶ್ರೀಮತಿ ಉಷಾ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ**
   - ಡಯಟ್‌ನಲ್ಲಿ ಆರ್.ಎಂ.ಎಸ್.ಎ, ಎಸ್.ಡಿ.ಎಂ.ಸಿ, ಎಂ.ಆರ್.ಪಿ ತರಬೇತಿ ಹಾಗೂ ಇತರೆ ಎಲ್ಲಾ ತರಬೇತಿಗಳನ್ನು ಡಿಸೆಂಬರ್‌ನಲ್ಲಿಯೇ ಮುಗಿಸಿರುತ್ತಾರೆ.
   - ತರಬೇತಿಗೆ ಸಂಬಂಧಿಸಿದ ಎಲ್ಲಾ ಸಂಚಿಗಳನ್ನು ಆಯಾ ತಾಲ್ಲೂಕಿನ ಬಿ.ಇ.ಓ/ಬಿ.ಆರ್.ಸಿ ಗಳಿಗೆ ತಲುಪಿಸಿರುವುದನ್ನು ಖಾತ್ರಿಪಡಿಸಿದರು.
   - ಕೆಲವು ಶಾಲೆಗಳಲ್ಲಿ ಎಸ್.ಟಿ.ಎಫ್ ತರಬೇತಿ ಕಲಿತು ಅನುಷ್ಠಾನ ಮಾಡಲು ಗಣಕಯಂತ್ರಗಳಿಲ್ಲ.
   - ಶಾಲಾ ಸಂಚಿತ ನಿಧಿಯಿಂದ ಗಣಕಯಂತ್ರ ಖರೀದಿ ವೆಚ್ಚವನ್ನು ಭರಿಸುವ ಪ್ರಸ್ತಾವನೆಯನ್ನು ಸಲ್ಲಿಸುವಂತೆ ತಿಳಿಸಿದರು.
   - ಎಸ್.ಟಿ.ಎಫ್ ತರಬೇತಿ ಪಡೆದ ಶಿಕ್ಷಕರು ಆ ಶಾಲೆಯ ಇತರೆ ಶಿಕ್ಷಕರಿಗೆ ತರಬೇತಿ ಮುಗಿದ ನಂತರ ಪ್ರಾತ್ಯಕ್ಷಿತೆಯನ್ನು ನೀಡಲು ನಿರ್ದೇಶಕರು ಸೂಚಿಸಿದರು.

7. **ಶ್ರೀಮತಿ ಶಾಂತಲಾ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ**
   - **ಸರ್ಕಾರಿ ಪ್ರೌಢ ಶಾಲೆ, ತಾವರೆಕೆರೆ, ಹೊಸಕೋಟೆ ತಾಲ್ಲೂಕು** ಇಲ್ಲಿನ ವಿಜ್ಞಾನ ಕೇಂದ್ರಕ್ಕೆ ಭೇಟಿ.
   - ಪ್ರಯೋಗಾಲಯ ಮತ್ತು ರಾಸಾಯನಿಕ ವಸ್ತುಗಳು ಹಾಗೂ ಪರಿಕರಗಳು ಹಾಳಾಗಿವೆ.
   - ಸಮುದಾಯ ಸಂಬಂಧಿತ ಕಾರ್ಯ ಚಟುವಟಿಕೆಗಳು ಕಡಿಮೆ ಮಾಡಿದ್ದಾರೆ.
   - ವಿಜ್ಞಾನ ಶಿಕ್ಷಕರು ವೇಷಭೂಷಣಗಳಲ್ಲಿ ವೈಜ್ಞಾನಿಕ ಮನೋಭಾವನೆ ವ್ಯಕ್ತಪಡಿಸುತ್ತಿಲ್ಲ.
   - ಬಿ.ಇ.ಓ ಕಛೇರಿಯಿಂದ ಸೂಕ್ತ ಸಮಯಕ್ಕೆ ಸುತ್ತೋಲೆಗಳು ಶಾಲೆಗಳಿಗೆ ತಲುಪುತ್ತಿಲ್ಲ.
   - ಶಾಲಾ ಗ್ರಂಥಾಲಯ ಬಳಕೆ ಸಮರ್ಪಕವಾಗಿಲ್ಲ.
   - ಯಾವುದೇ ಶಾಲಾ ವಹಿಗಳನ್ನು ದೃಢೀಕರಿಸಿರುವುದಿಲ್ಲ.
   - ಶಾಲೆಯಲ್ಲಿ ಮೂಲಭೂತ ಸೌಕರ್ಯಗಳ ವ್ಯವಸ್ಥೆ ಸೂಕ್ತವಾಗಿಲ್ಲ.
   - ಬ್ಯಾಕ್‌ಆಪ್ ಇಲ್ಲದ ಬ್ಯಾಟರಿಗಳು ಶಾಲೆಯಲ್ಲಿವೆ.
   - ಪ್ರತಿದಿನ ಶಾಲೆಯಲ್ಲಿ ಕಸದ ವಿಲೇವಾರಿವಾಗುತ್ತಿಲ್ಲ.
   - ಶ್ರೀಮತಿ ರಾಧಾ ಎಸ್ ನಾಯಕ್, ಮುಖ್ಯ ಶಿಕ್ಷಕರು ರಜೆಯಲ್ಲಿದ್ದರೂ ಪ್ರಭಾರವನ್ನು ಇತರೆ ಹಿರಿಯ ಸಹಶಿಕ್ಷಕರಿಗೆ ನೀಡದೇ ತಾವೇ ಹಣಕಾಸಿನ ವ್ಯವಹಾರಕ್ಕೆ ಸಹಿ ಮಾಡಿರುವುದು ಕಂಡು ಬಂದಿರುವ ಅಂಶವನ್ನು ತಿಳಿಸಿದರು.
   - ಬಿ.ಇ.ಓರವರು ಶಾಲೆಯನ್ನು ತಪಾಸಣೆ ಮಾಡಿ, ಆಗಿರುವ ನ್ಯೂನತೆಗಳನ್ನು ಪರಿಶೀಲಿಸಿ ತುರ್ತು ವರದಿ ಮಾಡಲು ನಿರ್ದೇಶಕರು ಸೂಚಿಸಿದರು.– ಕ್ರಮ ಬಿ.ಇ.ಓ . ಹೊಸಕೋಟೆ

8. **ಶ್ರೀ ಬಸಪ್ಪ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ**

- **ಸರ್ಕಾರಿ ಬಾಲಕರ ಪ್ರೌಢ ಶಾಲೆ, ಹೊಸಕೋಟೆ** ಭೇಟಿ.
- ಐ.ಸಿ.ಟಿ ಶಾಲೆಯಲ್ಲಿ ಎಲ್.ಸಿ.ಡಿ, ಪ್ರೊಜೆಕ್ಟರ್, ಯು.ಪಿ.ಎಸ್ ಗಳಿದ್ದರೂ, ಬ್ಯಾಟರಿಗೆ ಕನೆಕ್ಟ್ ಮಾಡಿರುವುದಿಲ್ಲ.
- ಆದರೂ ಸಹ ಬ್ಯಾಟರಿ ಮತ್ತು ಉಪಕರಣಗಳು ಉತ್ತಮವಾಗಿವೆ ಎಂದು ಶಾಲಾ ಶಿಕ್ಷಕರು ನಮೂನೆಯಲ್ಲಿ ಬರೆದಿರುತ್ತಾರೆ.
- **ಸರ್ಕಾರಿ ಬಾಲಕಿಯರ ಪ್ರೌಢ ಶಾಲೆ, ಹೊಸಕೋಟೆ** ಶಾಲೆಗೆ ಭೇಟಿ .
- ಈ ಶಾಲೆಯಲ್ಲಿನ 2 ಯು.ಪಿ.ಎಸ್‌ಗಳಲ್ಲಿ ಒಂದು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ.
- 14 ಬ್ಯಾಟರಿಯಲ್ಲಿ 8 ಬ್ಯಾಟರಿಗಳು ಸ್ಥಗಿತಗೊಂಡಿವೆ, 1 ಕಳೆದುಹೋಗಿದೆ.
- **ಎಸ್.ಆರ್.ಜಿ.ಎಸ್ ಪ್ರೌಢ ಶಾಲೆ, ಹೊಸಕೋಟೆ ಶಾಲೆಗೆ** ಭೇಟಿ.
- ಯು.ಪಿ.ಎಸ್ ಮತ್ತು ಬ್ಯಾಟರಿಯನ್ನು ಪ್ರತ್ಯೇಕ ಕಟ್ಟಡದಲ್ಲಿ ಇಟ್ಟಿರುತ್ತಾರೆ.
- **ಸರ್ಕಾರಿ ಪ್ರೌಢ ಶಾಲೆ, ದೊಡ್ಡಹುಲ್ಲೂರು, ಹೊಸಕೋಟೆ ತಾಲ್ಲೂಕು ಶಾಲೆಗೆ ಭೇಟಿ.**
- ಎಲ್.ಸಿ.ಡಿ, ಎಂ.ಎಫ್.ಡಿ ಮತ್ತು ಪ್ರೊಜೆಕ್ಟರ್ ಸರಬರಾಜಾಗಿಲ್ಲ.
- 4ನೇ ತರಗತಿ ಮಕ್ಕಳು ಕನ್ನಡ ಬರೆಯುವುದಕ್ಕೆ ಮತ್ತು ಓದುವುದಕ್ಕೆ ತುಂಬಾ ಕಷ್ಟಪಡುತ್ತಿರುವ ಅಂಶ ಗಮನಿಸಲಾಯಿತು.
- ಪದೇ ಪದೇ ಎಜುಸ್ಯಾಟ್ ದುರಸ್ತಿಯಾಗುತ್ತಿರುವುದರಿಂದ ತುಂಬಾ ತೊಂದರೆಯಾಗುತ್ತಿದೆ ಎಂದು ಶಿಕ್ಷಕರು ತಿಳಿಸಿದರು.
- ಐ.ಸಿ.ಟಿಗೆ ಒದಗಿಸಿರುವ ಉಪಕರಣಗಳು ನಿರ್ವಹಣೆ ಮತ್ತು ಬಳಕೆ ಉತ್ತಮವಾಗಿದೆ ಎಂದು ತಪ್ಪು ಮಾಹಿತಿ ಸಲ್ಲಿಸಿರುವ ಮುಖ್ಯ ಶಿಕ್ಷಕರಿಗೆ ಡಯಟ್‌ನಿಂದ ನೋಟೀಸ್ ನೀಡುವಂತೆ ನಿರ್ದೇಶಕರು ಸೂಚಿಸಿದರು.
- ಐ.ಸಿ.ಟಿ ಶಾಲೆಗಳಲ್ಲಿ ಸಂಪನ್ಮೂಲ ಬಳಕೆ ಮತ್ತು ಕಾರ್ಯಕ್ಷಮತೆ ಹೆಚ್ಚಿಸಲು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಲು ನಿರ್ದೇಶಕರು ತಿಳಿಸಿದರು.
- ಎಜುಸ್ಯಾಟ್ ಕಾರ್ಯಕ್ರಮವನ್ನು ಉತ್ತಮಪಡಿಸಲು, ಡಯಟ್‌ನಲ್ಲಿ ಎಜುಸ್ಯಾಟ್ ಕುರಿತು ಸಭೆ ನಡೆಸಿ ಎಜುಸ್ಯಾಟ್ ಕಾರ್ಯಕ್ರಮಕ್ಕೆ ಸಂಬಂಧಿಸಿದ ಸಮಸ್ಯೆಗಳ ಪಟ್ಟಿ ಮಾಡಿ ಕಾಸ್ಮಿಕ್ ಸಂಸ್ಥೆಗೆ ನೋಟೀಸ್ ನೀಡಲು ನಿರ್ದೇಶಕರು ಸೂಚಿಸಿದರು. ಕ್ರಮ– ಡಿ.ಎಸ್.ಇ.ಆರ್.ಟಿ. ಇ.ಟಿ ಶಾಖೆ
- ಬಿ.ಆರ್.ಸಿಗಳು ಎಜುಸ್ಯಾಟ್ ಉಪಕರಣದ ಕಾರ್ಯನಿರ್ವಹಣೆಯ ಕುರಿತು ವರದಿ ನೀಡಲು ಸೂಚಿಸಲಾಯಿತು.
- ಅಗತ್ಯವೆನಿಸಿದಲ್ಲಿ ಶಾಲೆಗಳಿಗೆ ಹೊಸದಾಗಿ ಎಜುಸ್ಯಾಟ್ ಉಪಕರಣ ಖರೀದಿಸಲು ಶಾಲಾ ಸಂಚಿತ ನಿಧಿಯಲ್ಲಿನ (ರೂ.10,000) (ಹತ್ತು ಸಾವಿರ ಮಾತ್ರ) ಹಣ ಬಳಸಲು ಅನುಮತಿ ನೀಡಿದ್ದು ಎಸ್.ಡಿ.ಎಂ.ಸಿಯಲ್ಲಿ ಈ ಕುರಿತು ನಿರ್ಣಯಿಸಿ ಅನುಮತಿ ಪಡೆದು ಅಳವಡಿಸಲು ಸೂಚಿಸಲಾಯಿತು. –ಕ್ರಮ ಬಿ.ಇ.ಒಗಳು

9. **ಶ್ರೀಮತಿ ಎಂ.ವಿ. ಕುಮಾರಿ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ**

- **ಸರ್ಕಾರಿ ಪ್ರೌಢ ಶಾಲೆ, ಬಾಶೆಟ್ಟಿ ಹಳ್ಳಿ, ದೊಡ್ಡಬಳ್ಳಾಪುರ** ತಾಲ್ಲೂಕು ಶಾಲೆ.
- ಶಾಲೆಯ ಎಲ್ಲಾ ಮಕ್ಕಳು Identity Card ಹಾಕಿರುವ ಅಂಶವನ್ನು ಗಮನಿಸಲಾಯಿತು.
- ಸಿ.ಸಿ.ಇ ಸಂಬಂಧಪಟ್ಟಂತೆ ಒಳ್ಳೆಯ ಪ್ರತಿಕ್ರಿಯೆ ಇದೆ.
- ಕೆಲವು ಸಂದರ್ಭದಲ್ಲಿ ಎಜುಸ್ಯಾಟ್ ಉಪಕರಣದ ತೊಂದರೆಯಿಂದಾಗಿ ಎಜುಸ್ಯಾಟ್ ಕಾರ್ಯಕ್ರಮ ಪ್ರಸಾರವಾಗುತ್ತಿಲ್ಲ.
- ಆರ್.ಎಂ.ಎಸ್.ಎ ಕಾಮಗಾರಿ ಪ್ರಗತಿಯಲ್ಲಿದೆ.
- ಬಹಳಷ್ಟು ಶಾಲೆಗಳಲ್ಲಿ ರೇಡಿಯೋ ದುರಸ್ತಿ ಇರುವುದರಿಂದ ರೇಡಿಯೋ ಕಾರ್ಯಕ್ರಮ ಕೇಳಿಸಲು ಸಾಧ್ಯವಾಗುತ್ತಿಲ್ಲವೆಂದು ಬಿ.ಇ.ಓ ನೆಲಮಂಗಲ ರವರು ನಿರ್ದೇಶಕರ ಗಮನ ಸೆಳೆಯಲಾಯಿತು.
- ಶಾಲೆಯಲ್ಲಿ ಲಭ್ಯವಿರುವ ಯಾವುದೇ ಚಾಲ್ತಿ/ಸಂಚಿತ ನಿಧಿಗಳ ಅನುದಾನದಿಂದ ದುರಸ್ತಿಗೆ ಕ್ರಮವಹಿಸಲು/ಹೊಸ ರೇಡಿಯೋ ಖರೀದಿಸಲು ನಿರ್ದೇಶಕರು ಸೂಚಿಸಿದರು. ಇದಕ್ಕೆ ಸಂಬಂಧಿಸಿದಂತೆ ಅನುದಾನ ಬಳಕೆಗೆ ಅನುಮತಿ ನೀಡಲು ಬಿ.ಇ.ಓ ರವರಿಗೆ ತಿಳಿಸಿದರು.

- ನೆಲಮಂಗಲ ತಾಲ್ಲೂಕಿನಲ್ಲಿ 21 ಟಿ.ಜಿ.ಟಿ ಶಾಲೆಗಳಿದ್ದು, ಪ್ರತಿ ಶಾಲೆಗೆ ಪಿ.ಸಿ.ಎಂ. ಹುದ್ದೆ ಮಾತ್ರ ಮಂಜೂರಾಗಿದೆ. ಆದರೆ 8ನೇ ತರಗತಿ ಬೋಧಿಸಲು ಕಲಾ ಶಿಕ್ಷಕರ ಅಗತ್ಯತೆ ಬಗ್ಗೆ ನಿರ್ದೇಶಕರ ಗಮನಕ್ಕೆ ತಂದರು. ಈ ಬಗ್ಗೆ ಸರ್ಕಾರದೊಂದಿಗೆ ಚರ್ಚಿಸಲಾಗುವುದೆಂದು ನಿರ್ದೇಶಕರು ಸಭೆಗೆ ಸೂಚಿಸಿದರು.

- ಬಿಸಿಯೂಟ ಕಾರ್ಯಕ್ರಮದಲ್ಲಿ ಬಹಳಷ್ಟು ಶಾಲೆಗಳಲ್ಲಿ ಮುಖ್ಯ ಶಿಕ್ಷಕರೆ ತೊಡಗಿಸಿಕೊಂಡಿರುವುದು ಕಂಡು ಬಂದಿರುತ್ತದೆ ಇದನ್ನು ಗಂಭೀರವಾಗಿ ಪರಿಗಣಿಸಿದ ನಿರ್ದೇಶಕರು ಬಿಸಿಯೂಟ ಕಾರ್ಯಕ್ರಮದ ಮುಖ್ಯ ಅಡಿಗೆಯವರಿಗೆ ವಹಿಸಿ, ಮುಖ್ಯ ಶಿಕ್ಷಕರಿಗೆ ಮೇಲುಸ್ತುವಾರಿ ಮಾಡಿ ಕ್ರಮಕೈಗೊಳ್ಳುವಂತೆ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದರು.
- ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಬಹಳಷ್ಟು ವರ್ಷಗಳಿಯಿಂದ ಸಿ.ಎ.ಎಲ್.ಸಿ, ಕಾರ್ಯಕ್ರಮ ಅನುಷ್ಠಾನದಲ್ಲಿದ್ದು, ತರಬೇತಿ ಹೊಂದಿದ ಶಿಕ್ಷಕರು ವರ್ಗಾವಣೆ, ಬಡ್ತಿ ಮುಖಾಂತರ ಬೇರೆ ಶಾಲೆಗೆ ಹೋಗಿರುತ್ತಾರೆ. CALC ಕಾರ್ಯಕ್ರಮವಿರುವ ಎಲ್ಲಾ ಶಾಲೆಗಳ ಶಿಕ್ಷಕರಿಗೆ ತರಬೇತಿ ನೀಡಲು ನಿರ್ದೇಶಕರಿಗೆ ಮನವಿ ಸಲ್ಲಿಸಲಾಯಿತು.
- 2015-16ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಈ ಅಂಶವನ್ನು ಪರಿಗಣಿಸಲು ಹಾಜರಿದ್ದ ಡಿ.ಎಸ್.ಇ.ಆರ್.ಟಿ ಅಧಿಕಾರಿಗಳಿಗೆ ಸೂಚಿಸಿದರು.
- ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಮುಖ್ಯ ಶಿಕ್ಷಕರಿಗೆ ಆಡಳಿತಾತ್ಮಕ ತರಬೇತಿಯ ಬಗ್ಗೆ ಚರ್ಚಿಸಲಾಯಿತು. 2015-16ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಈ ಅಂಶವನ್ನು ಪರಿಗಣಿಸಲು ಹಾಜರಿದ್ದ ಡಿ.ಎಸ್.ಇ.ಆರ್.ಟಿ ಅಧಿಕಾರಿಗಳಿಗೆ ಸೂಚಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ಹಂತದಲ್ಲಿ ನಡೆಯುವ ಮಾಸಿಕ ಸಭೆಗಳಲ್ಲಿ ಇದರ ಬಗ್ಗೆ ಹೆಚ್ಚು ಕಾಳಜಿ ವಹಿಸಿ ಅಗತ್ಯ ಕ್ರಮಕೈಗೊಳ್ಳುವಂತೆ ನಿರ್ದೇಶಕರು ಸೂಚಿಸಿದರು.
- ಕ್ಷೀರಾ ಭ್ಯಾಗ ಯೋಜನೆಯಡಿ ಮಕ್ಕಳಿಗೆ ಹಾಲನ್ನು ಪ್ರಾರ್ಥನೆಗೂ ಮುಂಚೆಯೇ ವಿತರಿಸುವುದು. ವಿತರಿಸುವಾಗ ಕನಿಷ್ಠ ಸುರಕ್ಷಾ ಕ್ರಮಗಳನ್ನು ಅನುಸರಿಸುವಂತೆ ಎಲ್ಲಾ ಮುಖ್ಯ ಶಿಕ್ಷರಿಗೆ ಜ್ಞಾಪನಾ ನೀಡಲು ನಿರ್ದೇಶಕರು ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದರು.
- ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹೊಸಕೋಟೆ ಗುಣಾತ್ಮಕ ಶಿಕ್ಷಣಕ್ಕಾಗಿ ಹಲವಾರು ಸ್ವಯಂಸೇವಾ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಉತ್ತಮ ಕಾರ್ಯನಿರ್ವಹಿಸುತ್ತಿದ್ದೇವೆ. ಹಾಗೂ ಈ ಬಾರಿ ಎನ್.ಟಿ.ಎಸ್.ಇ/ಎನ್.ಎಂ.ಎಂ.ಎಸ್ ಪರೀಕ್ಷೆಗಳನ್ನು ಉತ್ತಮವಾಗಿ ನಿರ್ವಹಿಸಿದ್ದೇವೆ. ಆಡಳಿತಾತ್ಮಕವಾಗಿ ಕಛೇರಿಯನ್ನು ಕ್ರಿಯಾಶೀಲಗೊಳಿಸಿ ಯಾವುದೇ ಶಿಕ್ಷಕರ ಸಮಸ್ಯೆ ಇಲ್ಲದಂತೆ ನೋಡಿಕೊಳ್ಳಲಾಗಿದೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.
- ಡಾ. ಕೃಷ್ಣಮೂರ್ತಿ, ಹಿ.ಸ.ನಿ, ಡಿ.ಎಸ್.ಇ.ಆರ್.ಟಿ ಎನ್.ಟಿ.ಎಸ್.ಇ/ಎನ್.ಎಂ.ಎಂ.ಎಸ್ ಪರೀಕ್ಷೆಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಕ್ಕಳು ಪರೀಕ್ಷೆ ಬರೆಯುತ್ತಿರುವ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ ಎಂದು ಮೂರು ವರ್ಷದ ಅಂಕಿ-ಅಂಶವನ್ನು ನೀಡಿದರು. ಮುಂದಿನ ವರ್ಷಗಳಲ್ಲಿ ಅರ್ಹ ಎಲ್ಲಾ ಮಕ್ಕಳು ಪರೀಕ್ಷೆ ಬರೆಯುವಂತೆ ಉಪನಿರ್ದೇಶಕರು (ಅಭಿವೃದ್ಧಿ ಮತ್ತು ಆಡಳಿತ) ರವರುಸೂಕ್ತ ಕ್ರಮ ತೆಗೆದುಕೊಳ್ಳುವಂತೆ ನಿರ್ದೇಶಕರು ಸೂಚಿಸಿದರು.]
- ನೆಲಮಂಗಲ ತಾಲ್ಲೂಕಿನಲ್ಲಿ 20 ಸಿ.ಆರ್.ಸಿ ಕೇಂದ್ರಗಳಿದ್ದು, ಈ ಪೈಕಿ ಕೇವಲ 5 ಸಿ.ಆರ್.ಸಿ ಗಳು ಕಾರ್ಯನಿರ್ವಹಿಸುತ್ತಿದ್ದು, 15 ಸಿ.ಆರ್.ಸಿ ಹುದ್ದೆಗಳು ಖಾಲಿ ಉಳಿದಿವೆ. ಹಾಗೂ ಉಳಿದ ತಾಲ್ಲೂಕುಗಳಲ್ಲಿ 20 ಕ್ಕೂ ಹೆಚ್ಚು ಸಿ.ಆರ್.ಸಿ ಹುದ್ದೆಗಳು ಖಾಲಿ ಉಳಿದಿರುವ ಬಗ್ಗೆ ನಿರ್ದೇಶಕರ ಗಮನಕ್ಕೆ ತರಲಾಯಿತು.
- ಮಾರ್ಚ್ 2015ರಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಮಾನ್ಯ ಆಯುಕ್ತರೊಂದಿಗೆ ಚರ್ಚಿಸಲಾಗುವುದೆಂದು ತಿಳಿಸುತ್ತಾ, ಆವರೆಗೆ ಹೆಚ್ಚುವರಿ ಶಿಕ್ಷಕರನ್ನು ಈ ಹುದ್ದೆಗಳಿಗೆ ತಾತ್ಕಾಲಿಕವಾಗಿ ನಿಯೋಜಿಸಿಕೊಳ್ಳಲು ಉಪನಿರ್ದೇಶಕರು (ಆಡಳಿತ) ರವರಿಗೆ ಸೂಚಿಸಿದರು.
- ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹೊಸಕೋಟೆ ರವರು ತಮ್ಮ ವಲಯದಲ್ಲಿ ಶಿಕ್ಷಕರಿಗೆ 15-20 ವರ್ಷಗಳ ಕಾಲಮಿತಿ ಬಡ್ತಿ ನೀಡುವಾಗ ಕಡ್ಡಾಯವಾಗಿ ಶಿಕ್ಷಕರಿಂದ ಕಾರ್ಯನಿರ್ವಹಣಾ ವರದಿಗಳನ್ನು ಪಡೆಯಲಾಗುತ್ತಿದೆ. ಈ ವರ್ಷದಲ್ಲಿ ಅವರು ಮಾಡಿದ ಉತ್ತಮ ಕಾರ್ಯಗಳ ಬಗ್ಗೆ ಪ್ರಶಂಸಿಲಾಗುತ್ತಿದೆ ಹಾಗೂ ವಯೋನಿವೃತ್ತಿ ಹೊಂದಿದ ಶಿಕ್ಷಕರಿಗೆ ಕಛೇರಿ ವತಿಯಿಂದ ಅಭಿನಂದನಾ ಪತ್ರವನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು. ಈ ಕಾರ್ಯವು ಉತ್ತಮವಾದದ್ದು, ಈ ಕಾರ್ಯವನ್ನು ಬೇರೆ ತಾಲ್ಲೂಕಿನವರೂ ಕೂಡ ಅಳವಡಿಸಿಕೊಳ್ಳಲು ನಿರ್ದೇಶಕರು ತಿಳಿಸಿದರು.
- ಕ್ಷೇತ್ರ ಸಮನ್ವಯಾಧಿಕಾರಿಗಳು, ದೇವನಹಳ್ಳಿ ರವರು ತಮ್ಮ ವಲಯದಲ್ಲಿ ಈ ಶೈಕ್ಷಣಿಕ ವರ್ಷದಲ್ಲಿ ನಡೆದ ವಿಕಸನ ವಿಜ್ಞಾನ ತರಬೇತಿಯನ್ನು ನೇರವಾಗಿ ವಿಜ್ಞಾನ ಪ್ರಯೋಗಾಲಯದಲ್ಲಿಯೇ ತರಬೇತಿ ನೀಡಲಾಯಿತು. ಇದನ್ನು ಎಲ್ಲಾ ಶಿಕ್ಷಕರು ಮೆಚ್ಚಿಗೆ ವ್ಯಕ್ತಪಡಿಸಿದರು ಎಂದು ಸಭೆ ಗಮನಕ್ಕೆ ತಂದರು.
- ಕ್ಷೇತ್ರ ಸಮನ್ವಯಾಧಿಕಾರಿಗಳು/ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮಗೆ ಲ್ಯಾಪ್‌ಟಾಪ್ ಸರಬರಾಜು ಮಾಡುವ ಬಗ್ಗೆ ಮನವಿ ಸಲ್ಲಿಸಿದರು. ಈಗಾಗಲೇ ಎಸ್.ಎಸ್.ಎ ವತಿಯಿಂದ ಲ್ಯಾಪ್‌ಟಾಪ್ ಬಿ.ಆರ್.ಸಿ ಗಳಿಗೆ ಸರಬರಾಜು ಮಾಡಲಾಗಿದೆ. ಈ ಲ್ಯಾಪ್‌ಟಾಪ್ ದುರಸ್ತಿ ಇದ್ದಲ್ಲಿ, ದುರಸ್ತಿಗೆ ಅಗತ್ಯ ಕ್ರಮವಹಿಸುವುದು. ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ ವತಿಯಿಂದ ಲ್ಯಾಪ್‌ಟಾಪ್

ಖರೀದಿಗಾಗಿ ಬಡ್ಡಿ ರಹಿತ ಸಾಲ ನೀಡಲಾಗುತ್ತಿದ್ದು, ಎಲ್ಲಾ ಅಧಿಕಾರಿಗಳು ಇದರ ಸದುಪಯೋಗ ಪಡೆಯಬೇಕೆಂದು ತಿಳಿಸಿದರು.

- ಬಿ.ಆರ್.ಸಿ ಹೊಸಕೋಟೆ ರವರು ಸಿ.ಆರ್.ಪಿ ಗಳಿಗೆ ಕಂಪ್ಯೂಟರ್ ಜ್ಞಾನ ಕಡಿಮೆ ಅವರುಗಳಿಗೆ ಕಂಪ್ಯೂಟರ್ ತರಬೇತಿ ಅಗತ್ಯ ಹಾಗು ಇಲಾಖೇತರ ಕಾರ್ಯಗಳನ್ನು ಕಡಿಮೆ ಮಾಡಲು ಕೋರಿದರು.
- ಸಭೆಯಲ್ಲಿ ಹಾಜರಿದ್ದ, ಸಂಪನ್ಮೂಲ ಶಿಕ್ಷಕರು ನಲಿ–ಕಲಿ ಹಾಗೂ ಸಿ.ಸಿ.ಇ ಅನುಷ್ಠಾನದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.
- ಶ್ರೀ ಗಂಗಮಾರೇಗೌಡ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಗದಗ ಜಿಲ್ಲೆಯಲ್ಲಿ ಡಿ.ಎಸ್.ಇ.ಆರ್.ಟಿ ಹಮ್ಮಿಕೊಂಡ ಹೊಸ ಕಾರ್ಯಕ್ರಮವಾದ ಶೈಕ್ಷಣಿಕ ಅದಾಲತ್ ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ಹಂಚಿಕೊಂಡರು.
- ನಿರ್ದೇಶಕರು ಮಾರ್ಚ್ ಕೊನೆಯವಾರದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿಯೂ ಸಹ ಶೈಕ್ಷಣಿಕ ಅದಾಲತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲು ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಸೂಚಿಸಿದರು.

ದಿನಾಂಕ 09–03–2015ರಂದು ನಡೆದ ಶೈಕಣಿಕ ಸ್ಪಂದನ ಕಾರ್ಯಕ್ರಮದಲ್ಲಿ ಚರ್ಚಿಸಿದ ಅಂಶಗಳ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ನಿರ್ದೇಶಕರು ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿದರು. ಶ್ರೀಮತಿ ಡಿ.ಎಂ. ರಾಜಲಕ್ಷ್ಮಿ, ಹಿರಿಯ ಉಪನ್ಯಾಸಕರು ರವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

(ಎಸ್. ಜಯಕುಮಾರ್)
ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಬೆಂಗಳೂರು.–85

1) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಅವಗಾಹನೆಗೆ ವಂದನಾಪೂರ್ವಕವಾಗಿ ಸಲ್ಲಿಸಿದೆ.
2) ಪ್ರಾಂಶುಪಾಲರು, ಡಯಟ್, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರ ಮುಂದಿನ ಅಗತ್ಯ ಕ್ರಮಕ್ಕೆ ಮತ್ತು ಅನುಪಾಲನಾ ವರದಿ ನೀಡುವ ಕ್ರಮಕ್ಕಾಗಿ.
3) ಉಪನಿರ್ದೇಶಕರು ಸಾ.ಶಿ.ಇ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ರವರಿಗೆ ಮುಂದಿನ ಕ್ರಮಕ್ಕಾಗಿ.
4) ಬೆಂಗಳೂರು ಗ್ರಾಮಾಂತರ ಜಿಲ್ಲೆ, ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ.
5) ಬೆಂಗಳೂರು ಗ್ರಾಮಾಂತರ ಜಿಲ್ಲೆ, ಎಲ್ಲಾ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ.
6) ಕಚೇರಿ ಪ್ರತಿ